Prajavani 16-02-2014

ಗಂಗಾಕಲ್ಯಾಣ ಪಂಪ್‌ಸೆಟ್‌ಗಳಿಗೆ ವಿದ್ಯುತ್

# ಉಚಿತ ವಿದ್ಯುತ್‌ಗೆ ₹ 6200 ಕೋಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗಂಗಾ ಕಲ್ಯಾಣ ಯೋಜನೆಯಡಿ ಬಾಕಿ ಇರುವ ಎಲ್ಲ ನೀರಾವರಿ ಪಂಪ್‌ಸೆಟ್‌ಗಳಿಗೆ 2014–15ನೇ ಸಾಲಿನಲ್ಲಿ ವಿದ್ಯುತ್ ಸಂಪರ್ಕ ಕಲ್ಪಿಸಲಾಗುತ್ತದೆ.

- ನೀರಾವರಿ ಪಂಪ್‌ಸೆಟ್‌ಗಳು, ಭಾಗ್ಯಜ್ಯೋತಿ, ಕುಟೀರ ಜ್ಯೋತಿ ಸ್ಥಾವರಗಳ ಉಚಿತ ವಿದ್ಯುತ್ ಸರಬರಾಜಿಗೆ ₹ 6200 ಕೋಟಿ ಸಬ್ಸಿಡಿ
- 98 ನಗರಗಳಲ್ಲಿ ಸ್ಮಾರ್ಟ್ ವಿದ್ಯುತ್ ಜಾಲ ಮತ್ತು ಸ್ಮಾರ್ಟ್ ಮಾಪಕ ಯೋಜನೆ ಜಾರಿ, ಹಸಿರು ವಿದ್ಯುತ್ ಕಾರಿಡಾರ್ ಯೋಜನೆ ಇತ್ಯಾದಿಗಳಿಗಾಗಿ ವಿದ್ಯುತ್ ಸರಬರಾಜು ಕಂಪೆನಿಗಳಿಗೆ ₹750 ಕೋಟಿ
- ಪ್ರತಿ ವಿದ್ಯುತ್ ಸರಬರಾಜು ಕಂಪೆನಿ ವ್ಯಾಪ್ತಿಯ 50 ಗ್ರಾಮಗಳಲ್ಲಿ ತಲಾ ₹ 5 ಲಕ್ಷ ವೆಚ್ಚದಲ್ಲಿ ಎಲ್‌ಇಡಿ ಸೌರಶಕ್ತಿ ಬೀದಿ ದೀಪಗಳ ವಿತರಣೆ



- ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ವಿತರಣಾ ಜಾಲ ಬಲಪಡಿಸಲು ₹50 ಕೋಟಿ
- ಎಚ್‌ವಿಡಿಎಸ್ ಯೋಜನೆ ವ್ಯಾಪ್ತಿಗೆ ಪ್ರತಿ ವಿದ್ಯುತ್ ಸರಬರಾಜು ಕಂಪೆನಿಯಿಂದ ಹೆಚ್ಚುವರಿಯಾಗಿ ಎರಡು ಉಪ ವಿಭಾಗಗಳ ಸೇರ್ಪಡೆ
- ಸೌರಶಕ್ತಿ ಯೋಜನೆಗೆ ₹ 20 ಕೋಟಿ ಸೇರಿದಂತೆ ಒಟ್ಟಾರೆ ಇಂಧನ ಇಲಾಖೆಗೆ ₹ 11,693 ಕೋಟಿ ಅನುದಾನ

16/2/14 VIJAYA VANI

## ವಿದ್ಯುತ್ ಬೇಡಿಕೆ ಏರಿಕೆ

ಬೆಂಗಳೂರು: ಬೇಸಿಗೆಗೆ ಕಾಲಿಡುವ ಮುನ್ನವೇ ವಿದ್ಯುತ್ ಬೇಡಿಕೆ ಹೆಚ್ಚಾಗುತ್ತಿದೆ. 150 ದಶಲಕ್ಷ ಯುನಿಟ್ ಅಂದಾಜಿನಲ್ಲಿದ್ದ ವಿದ್ಯುತ್ ಬೇಡಿಕೆ ಕಳೆದ ತಿಂಗಳು 165 ದಶಲಕ್ಷ ಯುನಿಟ್‌ಗೆ ಏರಿಕೆ ಆಗಿತ್ತು. ಈಗ ಬೇಡಿಕೆ ಪ್ರಮಾಣ 195 ದಶಲಕ್ಷ ಯುನಿಟ್ ದಾಟಿರುವುದು ಅಚ್ಚರಿ ತಂದಿದೆ.

Samyuktha Karnataka 16/02/2014

## ಗಂಗಾ ಕಲ್ಯಾಣ: ಐಪಿ ಸೆಟ್‌ಗಳಿಗೆ ವಿದ್ಯುತ್ ಸಂಪರ್ಕ

ಪ್ರಸಕ್ತ ಸಾಲಿನ ಮಾರ್ಚ್ 31ಕ್ಕೆ ಅಂತ್ಯಗೊಂಡಂತೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳು, ಅಲ್ಪಸಂಖ್ಯಾತ ನಿಗಮಗಳು ಅನುಷ್ಠಾನಗೊಳಿಸುತ್ತಿರುವ ಗಂಗಾ ಕಲ್ಯಾಣ ಯೋಜನೆಯ ಬಾಕಿ ಉಳಿದಿರುವ ಎಲ್ಲಾ ನೀರಾವರಿ ಪಂಪ್‌ಸೆಟ್‌ಗಳಿಗೆ 2014–15 ರಲ್ಲಿ ವಿದ್ಯುತ್ ಸಂಪರ್ಕ ಕಲ್ಪಿಸಲು ಸರ್ಕಾರ ಬದ್ಧವಾಗಿದೆ.

ಸೌರಶಕ್ತಿ ಯೋಜನೆಗಳಿಗೆ 20 ಕೋಟಿ ನೀಡಲಾಗಿದೆ. ರೈತರ ನೀರಾವರಿ ಪಂಪ್‌ಸೆಟ್‌ಗಳು, ಭಾಗ್ಯಜ್ಯೋತಿ, ಕುಟೀರ ಜ್ಯೋತಿ ಸ್ಥಾವರಗಳಿಗೆ ಉಚಿತ ವಿದ್ಯುತ್ ಪೂರೈಸಲು 6200 ಕೋ. ಸಹಾಯ ಧನ ನೀಡಲಾಗಿದೆ.

ವಿದ್ಯುತ್ ಸರಬರಾಜು ಕಂಪೆನಿಗಳಿಗೆ 750 ಕೋಟಿ ಬಂಡವಾಳ ನೀಡಿ ಪ್ರತಿ ಕಂಪೆನಿಯ ವ್ಯಾಪ್ತಿಯ 50 ಗ್ರಾಮಗಳಲ್ಲಿ ಪ್ರತಿ ಗ್ರಾಮಕ್ಕೆ 5 ಲಕ್ಷ ರೂ. ವೆಚ್ಚದಲ್ಲಿ ಎಲ್‌ಇಡಿ ಸೌರಶಕ್ತಿ ಬೀದಿ ದೀಪಗಳ ವಿತರಣೆ, ರಾಜ್ಯದ 10 ಮಹಾನಗರ ಪಾಲಿಕೆ ಪ್ರದೇಶದಲ್ಲಿ 50 ಕೋ. ವೆಚ್ಚದಲ್ಲಿ ವಿತರಣಾ ಮೂಲ ಸೌಕರ್ಯ, ಹೆಚ್‌ವಿಡಿಎಸ್ ಯೋಜನೆಯಡಿ ಪ್ರತಿ ಕಂಪೆನಿಯಲ್ಲಿ ಹೆಚ್ಚುವರಿಯಾಗಿ 2 ಉಪ ವಿಭಾಗಗಳ ಸೇರ್ಪಡೆ, ಸ್ಮಾರ್ಟ್ ವಿದ್ಯುತ್ ಜಾಲ ಮತ್ತು ಸ್ಮಾರ್ಟ್ ಮಾಪಕ ಯೋಜನೆ 98 ನಗರಗಳಲ್ಲಿ ಅನುಷ್ಠಾನ, ಒಟ್ಟಾರೆ 11,693 ಕೋಟಿ ರೂ.ಗಳನ್ನು ಇಂಧನ ಇಲಾಖೆಗೆ ಒದಗಿಸಲಾಗಿದೆ.